ನಾನೊಪ್ಪಿದೆ – ಈ ಲೋಕದ ದೃಷ್ಟಿಯಲ್ಲಿ ನಾ ಮಾಡಿರುವುದೆಲ್ಲ ತಪ್ಪು.

ನಾನೊಪ್ಪಿದೆ – ಜಗ ಜರಿವುದು ಅದಕ್ಕಾಗಿಯೇ ನನ್ನ. ಆದರಿದೇ ಜಗತ್ತು ಈ ನಿಷ್ಪಾಪಿ ಹುಡುಗಿ ನಿಷ್ಕಾರಣ ನರಳುವುದಕ್ಕೆ ಕಾರಣವಾಗಿಲ್ಲವೇನು? ಹತ್ಯೆಯ ಹೊಣೆ ಹೊರೆಸಿಲ್ಲವೇನು?

ಚೈತ್ರ, ನನಗೂ ಇತರರ ಅಂಕೆಯಲ್ಲಿ ಬದುಕಿ ಸಾಕಾಯಿತು. ಈಗ ಹೊಸಹುಟ್ಟು ಪಡೆದು ನನಗಾಗಿ ಬದುಕುವೆ. ನನ್ನ ಹೊಸಹುಟ್ಟಿನ ಜಗತ್ತಿನಲ್ಲಿ ಕಾಲಾತೀತ ಸ್ಮಾರಕಗಳಾಗಿ ನಿಂತಿರುವ ಈ ಹೆಬ್ಬಂಡೆಗಳಷ್ಟೇ ಅಚಲ ಪ್ರೀತಿ ನನಗೆ ದೊರಕಲಿ. ಯಾರೂ ಏನನ್ನೂ ಬಯಸದೇ ಪ್ರೀತಿಸುವುದನ್ನು ಕಲಿಯಲಿ...

ಸಾಕು ನಿಲ್ಲಿಸಿ ಸುನಯನ,

ನಿಮ್ಮ ಮಾತುಗಳು ತಾಳ್ಮೆ ಕಳೆದುಕೊಂಡು ಭಾವುಕವಾಗಿ ಕಣ್ಣೀರಿನತ್ತ ತಿರುಗುತ್ತಿವೆ. ನಿಮ್ಮ ಮೈ ಹೇಗೆ ಆವೇಶದಿಂದ ನಡುಗುತ್ತಿದೆ ನೋಡಿ. ಮಾತು ನಿಲ್ಲಿಸಿ ಸಮಾಧಾನ ಮಾಡಿಕೊಳ್ಳಿ. ನೀವೇನೂ ಅಪರಾಧಿಯಲ್ಲ. ಅಸ್ತಿತ್ವಕ್ಕಾಗಿ ಒಬ್ಬರ ಕತ್ತು ಕುಯ್ದು ಇನ್ನೊಬ್ಬರು ಬದುಕುತ್ತಿರುವ ಇಂಥಲ್ಲಿ ನೀವು ತಲೆ ತಗ್ಗಿಸಬಹುದಾದ ಯಾವ ಅನ್ಯಾಯವೂ ಮಾಡಿಲ್ಲ. ನಿಮಗೆ ಅನ್ಯಾಯ ಮಾಡಿದವರು ಎಂದೂ ತಲೆಯೆತ್ತದ ಹಾಗೆ ನಾಚಿಕೆಯಲ್ಲಿ ತಲೆತಗ್ಗಿಸಬೇಕು. ನೀವು ನೊಂದು, ನಿಮ್ಮ ನಿಟ್ಟುಸಿರಿನ ಭಾರ ಈ ಜಗತ್ತಿನ ಮೇಲೆ ಹಾಕಬೇಡಿ. ನಿಮ್ಮಂಥ ಸಾತ್ವಿಕರು, ಸಹನೆಗೆ ಮೂರ್ತಿಯಾದವರು ಸಿಟ್ಟಿಗೆದ್ದರೆ ಪಾಪಿಗಳಿಂದಲೇ ತುಂಬಿ ತುಳುಕುತ್ತಿರುವ ಈ ನೆಲದಲ್ಲಿ ಹೆಜ್ಜೆ ಇಡಲೂ ಸ್ಥಳ ಉಳಿಯದೆ ಹೋದೀತು. ಹಾಗೆ ನೋಡಿದರೆ – ಎಲ್ಲರಿಗಿಂತ ಹೆಚ್ಚಿಗೆ ನಿಮ್ಮಂಥವರಿಗೆ ಇಲ್ಲಿ ಬದುಕಲು ಯೋಗ್ಯತೆ – ಹಕ್ಕು ಎರಡೂ ಇರುವುದು. ನಿಮ್ಮಂಥವರಿಂದಲೇ ನಾವೆಲ್ಲ ಬೆಳಗುವೆವು.

ಯಾರು ಹೇಳುತ್ತಾರೆ ನರಳಿದ ಹೆಣ್ಣು ತನಗೆ ಬೇಕಿರುವುದು ಆಯ್ಕೆ ಮಾಡಿಕೊಂಡರೆ ಅದು ತಪ್ಪೆಂದು? ನಿಮಗೆ ಹೇಗನಿಸುತ್ತದೊ ಹಾಗಿರಿ. ಹಾಗೆಯೇ ಇರಬೇಕು ಕೂಡ. ನಮ್ಮ ಜತೆಯೂ ಬೇಸರವೆನಿಸಿದರೆ ನಮ್ಮಿಂದಲೂ ದೂರಹೋಗಿ ಅನಿಸಿದಂತೆ, ಅನಿಸಿದಲ್ಲಿ ಇರಿ. ನಿಮ್ಮ ಬದುಕು ನಮಗೆಲ್ಲ ಶ್ರದ್ಧೆ – ನಂಬಿಕೆ ಕಲಿಸಲಿ. ಮುಖ್ಯ – ನಿಮ್ಮ ತುಟಿಗಳ್ಯಾವತ್ತೂ ಬಲವಂತದಿಂದ ಅರಳಬಾರದು. ಸಹಜವಾಗಿ ಅರಳಬೇಕು. ವಿಷಾದ ತುಂಬಿಕೊಂಡಿರುವ ನಿಮ್ಮ ಕಣ್ಣುಗಳಿಗೆ ಹೊಸಬೆಳಕು ತುಂಬಿಕೊಳ್ಳಿ, ಮತ್ಯಾವತ್ತೂ ಖಾಲಿಯಾಗದ ಹಾಗೆ ಈ ಜಗತ್ತು ನಿಜವಾಗಿಯೂ ಬದುಕಲು ತುಂಬ ಯೋಗ್ಯವಾದುದು; ಸುಂದರವಾದುದು – ಎಲ್ಲ ಆಘಾತಗಳ ನಂತರವೂ ಎಂದು ನನಗೆ ನಿಮ್ಮನ್ನು ನೋಡಿದ ಮೇಲೆ ತಿಳಿಯಿತು. ನನಗೇನೂ ಆಗಿರದೆ, ಎಲ್ಲ ನಾನೇ ತಲೆಗೆ ಹೇರಿಕೊಂಡು ಭೋರಾಡಿ ಅತ್ತು ಸಾಯಲು ಹೊರಟಿದ್ದೆನಲ್ಲ ಸುನಯನ, ಅದೃಷ್ಟವಶಾತ್ ನೀವು ಸಿಕ್ಕಿರಿ. ನಿಮ್ಮೊಡನೆ ಕಳೆದ ಒಂದು ಕ್ಷಣವೂ ಸಾಕು ಜೀವನ ಧನ್ಯವಾಗಿಸಿಕೊಳ್ಳಲು. ಆ ಕ್ಷಣದ ನೆನಪಿನಿಂದಲೇ ಬದುಕನ್ನು ಸವೆಸಿಬಿಡಬಹುದು, ಅಷ್ಟು ಮಧುರತೆ ಇದೆ ಆ ಕ್ಷಣಕ್ಕೆ. ನೀವು ನಮ್ಮ ನಡುವೆ ಇರುವುದು ನಮಗೆಲ್ಲ ಕೊಡುಗೆ ಸುನಯನ. ವಿಷಾದವೆಂದರೆ ನಿಮ್ಮಂಥವರೂ ಪ್ರೀತಿ ಅರಸಿದ್ದು, ಅದೇ ನಿಮ್ಮ ಬಳಿ ಬರುವುದುಬಿಟ್ಟು. ಆದರೆ ಪ್ರೀತಿ ಹಾಗೆ... ಅದ್ಯಾವತ್ತೂ ಒಣಗುವ ನೊರೆಬಯಸುವುದಿಲ್ಲ, ಕೆನೆಯನ್ನು ಬಯಸುತ್ತದೆ. ಅದು ಬಿರುಗಾಳಿಯನ್ನಲ್ಲ – ತಂಗಾಳಿಯನ್ನು ಆಶಿಸುತ್ತದೆ. ಪ್ರೀತಿ ಕಡಲಿನಷ್ಟು ಆಳ ಅಗಲವಾಗ ಬಯಸುತ್ತದೆ. ನನಗೆ ಗೊತ್ತಾಗುವುದಿಲ್ಲ. ಈ ಜನ ಸೇತುವೆ ಕಟ್ಟದೆ ಅದಕ್ಕೆ ಅಣೆಕಟ್ಟನ್ನೇಕೆ ಅಡ್ಡಗಟ್ಟುತ್ತಾರೆಂದು.